ದಿನಾಂಕಃ28-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದಃ**

ದಾವಾಸ್ತಿ ಮೂಲತಃ ನಮ್ಮ ಮನೆತನಕ್ಕೆ ನಮ್ಮ ಅಜ್ಜನಾದ ಬಸಜ್ಜನಿಂದ ಬಂದಿರುತ್ತದೆ. ಸದರಿ ಬಸಜ್ಜನಿಗೆ ಇಬ್ಬರುಮಕ್ಕಳು ಅವರು ಸರೋಜಮ್ಮ ಮತ್ತು ಮಲ್ಲೇಶಪ್ಪ ಎಂದು. ದಾವಾಸ್ತಿ ನಮ್ಮ ಅಜ್ಜನಿಗೆ ಯಾವ ದಾಖಲೆಯ ಆಧಾರದ ಮೇಲೆ ಬಂದಿರುತ್ತದೆ ಎಂದು ನನಗೆ ಹೇಳಲಾಗುವುದಿಲ್ಲ. ದಾವಾಸ್ತಿ ಸದರಿ ನಮ್ಮ ಅಜ್ಜನ ಹೆಸರಿಗೆ ಯಾವ ವರ್ಷದಿಂದ ಪ್ರಾರಂಭಿಸಿ ಯಾವ ವರ್ಷದವರೆಗೆ ಮುಂದುವರೆಯಿತು ಎಂದರೆ ಸಾಕ್ಷಿ ಯಾವ ವರ್ಷದಿಂದ ಪ್ರಾರಂಭವಾಯಿತು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾಸ್ತಿ ನಮ್ಮ ಅಜ್ಜನ ಹೆಸರಿನಲ್ಲಿ 2003 ರವರೆಗೂ ಇತ್ತು. ಬಸಜ್ಜನಿಗೆ 4 ಜನ ಅಣ್ಣ ತಮ್ಮಂದಿರು, ಸದರಿಯವರಿಗೆ ಅಕ್ಕತಂಗಿಯರು ಇರಲಿಲ್ಲ. ಸದರಿ 4 ಜನ ತಮ್ಮ ಕುಟುಂಬದ ಆಸ್ತಿಗಳನ್ನು ಯಾವಾಗ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ವಿಭಾಗವಾಗಿತ್ತು. ಸದರಿಯವರು ನೊಂದಾಯಿತ ವಿಭಾಗ ಪತ್ರ ಮಾಡಿಕೊಂಡಿರುವರೋ ಅಥವಾ ಜುಬಾನಿ ಹಿಸ್ಸಾ ಮಾಡಿಕೊಂಡಿರುವರೋ ಎಂದರೆ ನನಗೆ ಗೊತ್ತಿಲ್ಲ. ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಈ ದಾವೆಯ 2 ನೇ ಪ್ರತಿವಾದಿ ಪಾಲು ವಿಭಾಗ ಕೋರಿ ಈ ದಾವೆಯ ದಾವಾಸ್ತಿಯನ್ನು ಸೇರಿಸಿ ಅಸಲು ದಾವಾ ನಂ 13/2019 ರಂತೆ ನಮ್ಮ ತಂದೆಯವರನ್ನು ಪಕ್ಷಗಾರರಾಗಿ ಮಾಡಿ ದಾವೆ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನ ತಂದೆ ಹಾಜರಾಗಿ ವಕೀಲರ ಮೂಲಕ ಪ್ರತಿನಿಧಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಸಲು ದಾವಾ ನಂ 13/2019 ರ ವಿದ್ಯಾಮಾನಗಳನ್ನು ತಿಳಿದು ನಿಪಿ-1 ರಂತೆ ನಾನು ಮತ್ತು ನನ್ನ ತಂದೆ ಶಾಮೀಲಾಗಿ ದಾಖಲೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ನಿಪಿ-1 ರಲ್ಲಿ ಅಸಲು ದಾವಾ ನಂ 13/2019 ರ ದಾವೆ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿಯಿರುವ ವಿಚಾರವನ್ನು ನಾನು ಉಲ್ಲೇಖಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾಸ್ತಿಯ ಖಾತೆ ಮತ್ತು ಪಹಣಿ 2019 ಕ್ಕೂ ಪೂರ್ವ ನನ್ನ ಅಜ್ಜನ ಹೆಸರಿನಲ್ಲಿ ಸುಮಾರು 25 ವರ್ಷಗಳಿಂದ ಇತ್ತು. ಸಾಕ್ಷಿಗೆ ಈಗ ಒಂದು ಪೊಟೋವನ್ನು ತೋರಿಸಲಾಗಿ ಸದರಿ ಪೋಟೋದಲ್ಲಿ ಕಾಣಿಸುತ್ತಿರುವ ವ್ಯಕ್ತಿಯೇ 1 ನೇ ಪ್ರತಿವಾದಿ ಎಂದರೆ ಸರಿ. ದಾವಾಸ್ತಿಯಲ್ಲಿ ಸದರಿ ಪೊಟೋದಲ್ಲಿ ಕಾಣಿಸುತ್ತಿರುವ ಕೊಳವೆ ಬಾವಿ ಇದೆ ಎಂದರೆ ಸರಿ. ಸದರಿ ಪೊಟೋವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ **ನಿಡಿ-1** ಎಂದು ಗುರುತಿಸಲಾಯಿತು.

ಸರ್ವೆ ನಂ 10/16 ರ ಮಾಹಿತಿ ನನಗೆ ಗೊತ್ತಿಲ್ಲ. ಜಿ ಬಿ ಮಲ್ಲೇಶಪ್ಪ ಎಂದರೆ ನನ್ನ ತಂದೆ ಕಮಲಮ್ಮ ಎಂದರೆ ನನ್ನ ತಾಯಿ. ತಹಶೀಲ್ದಾರ್ ಕಚೇರಿಯಲ್ಲಿ ನಮ್ಮ ತಂದೆ ನಮ್ಮ ತಾಯಿಯ ವಿರುದ್ಧ ಯಾವ ವಿಚಾರವಾಗಿ ಪ್ರಕರಣ ದಾಖಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ.

(ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.